<u>**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**</u>

<u>ಎಸ್.ಸಿ ಸಂಖ್ಯೆ:- **199/2025**</u>

| | | |
|---|---|---|
| ಸಾಕ್ಷಿದಾರನ ಹೆಸರು | : ಜಯಮ್ಮ | ಪಿ.ಡಬ್ಲ್ಯೂ-12 |
| ತಂದೆಯ /ಗಂಡನ ಹೆಸರು | : ವೆಂಕಟರಾಜು | ಸಿ.ಡಬ್ಲ್ಯೂ-17 |
| ವಯಸ್ಸು | : 74 ವರ್ಷ | |
| ಉದ್ಯೋಗ | : ಗೃಹಿಣಿ | |
| ವಾಸಸ್ಥಳ | : ಗಾಂಧಿನಗರ, ಮೈಸೂರು | |

<u>**ಸಾಕ್ಷಿಯನ್ನು ಈ ದಿನ ದಿಃ 07.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**</u>

<u>**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**</u>

**1.** ನನ್ನ ಬಳಿ ವಾಹನಗಳಿದ್ದು, ಅದರಲ್ಲಿ ಒಂದು ಆಟೋ ಕೂಡ ಇದ್ದು, ಅದರ ನಂಬರ್ ನನಗೆ ನೆನಪಿರುವುದಿಲ್ಲ. ನಾನು ಸದರಿ ಆಟೋವನ್ನು ಸಾದಿಕ್ ಎನ್ನುವವರಿಗೆ 10-12 ವರ್ಷಗಳ ಹಿಂದೆ ಮಾರಾಟ ಮಾಡಿರುತ್ತೇನೆ. ನಾನು ಸದರಿ ಆಟೋದ ದಾಖಲೆಗಳನ್ನು ಸಹ ಮಾರಾಟ ಮಾಡಿದವರಿಗೆ ನೀಡಿರುತ್ತೇನೆ. ನಂತರ ಆಟೋವನ್ನು ಅವರ ಹೆಸರಿಗೆ ಬದಲಾಯಿಸಿಕೊಂಡಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸಾದಿಕ್ ರವರು ಸದರಿ ಆಟೋವನ್ನು ಬೇರೆಯವರಿಗೆ ಮಾರಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ಯಾರಿಗೆ ಮಾರಿರುತ್ತಾರೆ ಎಂದು ನನಗೆ ತಿಳಿದುಬಂದಿಲ್ಲ. ನಂತರ ಪೊಲೀಸರು ನನ್ನನ್ನು ಸದರಿ ಆಟೋವನ್ನು ಮಾರಿದ ಬಗ್ಗೆ ವಿಚಾರಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**2.** ನಿಮ್ಮ ಹೆಸರಿನಲ್ಲಿದ್ದ ಆಟೋದ ನೊಂದಣಿ ಸಂಖ್ಯೆ:- ಕೆಎಃ- **05** ಬಿಃ-**5019** ಆಗಿರುತ್ತದೆ ಎಂದರೆ , ಸಾಕ್ಷಿ ಇರಬಹುದು ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ 3 ನೇ ಆರೋಪಿ ಪರ ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ

ಮರುವಿಚಾರಣೆಃ- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

Sd/-

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**